**ಓ.ಎಸ್‌ಃ ೧೬೫/೨೦೧೮**

ಪಿ. ಡಬ್ಲ್ಯೂ ಃ 1

**<u>ಸಾಕ್ಷಿಗೆ ದಿನಾಂಕ 13-02-2023 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ</u>**

ದಾವಾ ಷಡ್ಯೂಲ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಸುಮಾರು 25-30 ವರ್ಷದಿಂದ ಸ್ವಾಧೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು 10 ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 1994 ರಲ್ಲಿ 2 ನೇ ಪ್ರತಿವಾದಿಯರ ಹೆಸರಿಗೆ ಮ್ಯುಟೇಶನ ಆಗಿದೆ ಎಂದರೆ ಸರಿಯಲ್ಲ. 1994 ರಿಂದಲೂ 2 ನೇ ಪ್ರತಿವಾದಿ ದಾವಾ ಷಡ್ಯೂಲ ಸ್ವತ್ತಿನಲ್ಲಿ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ನಾನು ಜಮೀನನ್ನು ಮಾರಾಟ ಮಾಡಿಲ್ಲ ಎಂದು ನುಡಿಯತ್ತಾರೆ. 2 ನೇ ಪ್ರತಿವಾದಿ ಸುಮಾರು 22 ವರ್ಷಗಳಿಂದ ದಾವಾ ಷಡ್ಯೂಲ ಸ್ವತ್ತಿನಲ್ಲಿ ಸಾಗುವಳಿ ಮಾಡುವ ವಿಚಾರ 1

ನೇ ವಾದಿ ಹಾಗೂ 1 ನೇ ಪ್ರತಿವಾದಿಗೆ ಗೊತ್ತಿತ್ತು ಎಂದರೆ ಸರಿ. 2 ನೇ ಪ್ರತಿವಾದಿ ನಮ್ಮ ದೂರದ ಸಂಬಂದಿ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ವಾದಿ ಬೇರೆಯಾಗಿ 30 ವರ್ಷಗಳಾಗಿದೆ ಎಂದರೆ ಸರಿಯಲ್ಲ , 20 ವರ್ಷಗಳಾಗಿದೆ. ಪ್ರತ್ಯೇಕವಾದ ನಂತರ ನಾನು ಹಾಗೂ 1 ನೇ ವಾದಿ ಹಾಗೂ 1 ನೇ ಪ್ರತಿವಾದಿ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದೇವೆ ಎಂದರೆ ಸರಿ.

ದಾವಾ ಷಡ್ಯೂಲ ಸ್ವತ್ತಿನಲ್ಲಿ ಭಾಗ ಕೋರಿ ನಾನು ದಾವೆ ಸಲ್ಲಿಸಿರುತ್ತೇನೆ. ಲಕ್ಷ್ಮಣ ದತ್ತು ಕ್ಕೆ ಹೋಗಿರುತ್ತಾರೆ ಎಂದರೆ ಸರಿ. ದತ್ತಕ ತಂದೆಯ ಹೆಸರು ರಾಮಣ್ಣ ಎಂದರೆ ಸರಿ. ರಾಮಣ್ಣ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಷಡ್ಯೂಲ ಸ್ವತ್ತನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿ ಇಲ್ಲ. ದಾವಾ ಐಟಂ ನಂ. 2 , 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ತಂದೆ ತೀರಿ ಹೋದ ನಂತರ ಹಿರಿಯ ಮಗ 1 ನೇ ಪ್ರತಿವಾದಿ ನಮ್ಮ ಕುಟುಂಬದ ಹಿರಿತನ ಮಾಡುತ್ತಿದ್ದರು ಎಂದರೆ ಸರಿ. ಸುಮಾರು 15 ವರ್ಷಗಳ ಕಾಲ ಹಿರಿತನ ಮಾಡಿರುತ್ತಾರೆ. 1 ನೇ ಪ್ರತಿವಾದಿ ಹಿರಿತನ ಮಾಡುವಾಗ ನಾನು ಚಿಕ್ಕವನು ಇದ್ದೇನು ಎಂದರೆ ಸರಿ. ಚಿಕ್ಕವನಾಗಿದ್ದರಿಂದ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. 1 ನೇ ವಾದಿ ಹಾಗೂ 1 ನೇ ಪ್ರತಿವಾದಿ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಯಾೋಗ ಕ್ಷೇಮವನ್ನು 1 ನೇ ವಾದಿ ಹಾಗೂ 1 ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡು 30-35 ವರ್ಷಗಳಾಗಿವೆ ಎಂದರೆ ಸರಿ.

ನನ ತಂದೆ ತೀರಿಕೊಂಡ ನಂತರ 1 ನೇ ಪ್ರತಿವಾದಿ ದಾವಾ ಐಟಂ ನಂ. 2 ರ ಜಮೀನಲ್ಲಿ ಬಾವಿ ತೋಡಿಸಿರುತ್ತಾರೆ ಎಂದರೆ ಸರಿ. ಬಾವಿಯಲ್ಲಿ ಸರಿಯಾಗಿ ನೀರು ಬಂದಿರಲಿಲ್ಲ ಹಾಗೂ ಭಾವಿ ತೋಡಿಸಲು 2 ನೇ ಪ್ರತಿವಾದಿಯ ಬಳಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಮೂರು ಜನ ಸಹೋದರರು ಬ್ಯಾಂಕನಿಂದ ಸಾಲ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಲ ತೀರಿಸಲು ಹಾಗೂ ಮನೆತನದ ಜವಾಬ್ದಾರಿ ನಿಬಾಯಿಸಲು ನಮಗೆ ಕಷ್ಟವಾಗುತ್ತಿತ್ತು

ಎಂದರೆ ಸರಿ. ನಾವು ಮೂರು ಜನ ಸಹೋದರರು ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡಲು ಹೋಗಿದ್ದೇವು ಎಂದರೆ ಸರಿ.

ಬ್ಯಾಂಕ ಸಾಲ ತೀರಿಸಲು 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಬಳಿ ಸಾಲ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿ ದಾವಾ ಐಟಂ ನಂ. 1 ನ್ನು 1994 ರಲ್ಲಿ ಮೌಖಿಕವಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮ್ಯುಟೇಶನಲ್ಲಿ 2 ನೇ ಪ್ರತಿವಾದಿ ಅಕ್ಕ ಆಗಿದ್ದರಿಂದ ಅವರ ಹೆಸರಿಗೆ ಜಮೀನು ನೀಡುತ್ತಿದ್ದೆವೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. 1994 ರಿಂದಲೂ 2 ನೇ ಪ್ರತಿವಾದಿ ದಾವಾ ಐಟಂ ನಂ. 1 ರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಾನು, 1 ನೇ ವಾದಿ , 1 ನೇ ಪ್ರತಿವಾದಿ ನಮ್ಮ ಮನೆತನದ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿದ್ದೆವೆ ಎಂದರೆ ಸರಿ. ವಿಭಾಗದಲ್ಲಿ ದಾವಾ ಐಟಂ ನಂ. 2 ನ್ನು ನಾನು ಹಾಗೂ 1 ನೇ ವಾದಿ 1 ನೇಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷಡ್ಯೂಲ ಸ್ವತ್ತುಗಳಲ್ಲಿ ನನಗಾಗಲಿ , 1 ನೇ ವಾದಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಷಡ್ಯೂಲ ಸ್ವತ್ತಿಗೆ 2 ನೇ ಪ್ರತಿವಾದಿ ತದ್ವಿರುದ್ದ ಮಾಲೀಕಳಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಐಟಂ ನಂ. 1 ರಲ್ಲಿ ಸ್ವಾಧೀನದಲ್ಲಿರುವ ವಿಚಾರ ನನಗೆ ಹಾಗೂ ಊರಿನ ಜನರಿಗೆ ಗೊತ್ತಿದೆ ಎಂದರೆ ಸರಿ. 2 ನೇ ಪ್ರತಿವಾದಿಯ ಸ್ವಾಧೀನಕ್ಕೆ ನಾನಾಗಲಿ ,ಬೇರೆ ಯಾರೆ ಆಗಲಿ ಯಾವುದೇ ರೀತಿ ತೊಂದರೆ ನೀಡಿಲ್ಲ ಎಂದರೆ ಸರಿ .

2 ನೇ ಪ್ರತಿವಾದಿ ನಮ್ಮಬ್ಯಾಂಕನ ಸಾಲ ತೀರಿಸಲು 1 ನೇ ಪ್ರತಿವಾದಿಗೆ ರೂ. 70 ಸಾವಿರ ಸಾಲ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಬೇರೆಯವರ ಚಿತಾವಣೆ ಮೇರೆಗೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಯಲಬುರ್ಗಾ